ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ ಸಿ3(4)ಪ್ರಾ.ಶಿ ಉ.ವ್ಯಾ.ಬಾ/ಅಂಚೆ/01-11-12 ದಿನಾಂಕ:02-04-2012

ಸುತ್ತೋಲೆ

******

ವಿಷಯ: ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಬಾಹ್ಯವಾಗಿ/ಅಂಚೆ ಮತ್ತು ತೆರಪಿನ ಉನ್ನತ ವ್ಯಾಸಂಗ ಪಡೆಯಲು ಅನುಮತಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಂಖ್ಯೆ ಸಿ3(4)ಪ್ರಾ.ಶಿ.ಉ.ವ್ಯಾ.51/2004-05 ದಿ. 15-10-2005.

2. ಸರ್ಕಾರದ ಆದೇಶ ಸಂಖ್ಯೆ ಜಿಎಡಿ 4 ಎಸ್‌ಆರ್‌ಎಸ್ 73 ದಿ. 05-02-1973.

***********

ಸರ್ಕಾರಿ ಆದೇಶ ಸಂಖ್ಯೆ ಜಿಎಡಿ 4 ಎಸ್‌ಆರ್‌ಸಿ 73 ದಿ. 05-02-1973 ರಲ್ಲಿ " The Government servants prosecuting studies without attending colleges or institutions and appearing for examinations as external students for which no permission is necessary" ಎಂದಿದ್ದು, ಅದರಂತೆ ಶಿಕ್ಷಕರ ಅಧಿಕೃತ ಕರ್ತವ್ಯಕ್ಕೆ ಧಕ್ಕೆಯಾಗದಂತೆ .ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಬಾಹ್ಯವಾಗಿ/ ಅಂಚೆ ಮತ್ತು ತೆರಪಿನ ಮೂಲಕ ಬಿಎ, ಬಿಇಡಿ ಮತ್ತಿತರ ಉನ್ನತ ವ್ಯಾಸಂಗ ಪಡೆಯಲು ಇಲಾಖಾ ಅನುಮತಿ ಅಗತ್ಯ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಈ ರೀತಿ ಬಾಹ್ಯ/ ಅಂಚೆ ತೆರಪಿನ ವ್ಯಾಸಂಗ ಮಾಡಲು ಇಚ್ಛಿಸಿರುವ ಶಿಕ್ಷಕರು Contact Programme, ಪರೀಕ್ಷೆ ಇತ್ಯಾದಿ ಕಾರಣಗಳನ್ನು ನೀಡಿ ರಜಾ ಮಂಜೂರಾತಿಗೆ ಕೋರಿಕೆ ಸಲ್ಲಿಸಿದಾಗ ಸಕ್ಷಮ ಪ್ರಾಧಿಕಾರಿಗಳು ಅಂತಹ ಮನವಿಗಳನ್ನು ಪರಿಶೀಲಿಸಿ ಸಂದರ್ಭಾನುಸಾರ ಶಾಲಾ ಕೆಲಸಕ್ಕೆ ಧಕ್ಕೆಯಾಗದಂತೆ ರಜೆಯನ್ನು ಮಂಜೂರು ಮಾಡುವ ಹಕ್ಕುಳ್ಳವರಾಗಿರುತ್ತಾರೆ.

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಸರ್ಕಾರದಿಂದ ಅಂಗೀಕೃತವಾಗಿರುವ ವಿಶ್ವವಿದ್ಯಾಲಯದಿಂದ ಬಾಹ್ಯವಾಗಿ/ ಅಂಚೆ ತೆರಪಿನ ಉನ್ನತ ವ್ಯಾಸಂಗ ಮಾಡಲು ಯಾವುದೇ ನಿರ್ಭಂದ ಇರುವುದಿಲ್ಲ. ಅಂತೆಯೇ ಸರ್ಕಾರದಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಬಾಹ್ಯವಾಗಿ/ ಅಂಚೆ ತೆರಪಿನ ಉನ್ನತ ವ್ಯಾಸಂಗ ಮಾಡಿದ ಬಗ್ಗೆ ಶಿಕ್ಷಕರು ಸಲ್ಲಿಸುವ ಪ್ರಮಾಣಪತ್ರದ ನೈಜತೆಯನ್ನು ಖಾತರಿಪಡಿಸಿಕೊಂಡ ನಂತರ ಸೇವಾಪುಸ್ತಕದಲ್ಲಿ ಅಂತಹ ಉನ್ನತ ವ್ಯಾಸಂಗದ ಹೊಂದಿದ ವಿವರಗಳನ್ನು ನಮೂದಿಸಲು ಹಾಗೂ ಸರ್ಕಾರದಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಉನ್ನತ ವ್ಯಾಸಂಗ ಪಡೆದಿರುವುದನ್ನು ಖಾತರಿಪಡಿಸಿಕೊಂಡ ನಂತರ, ಖಾಯಂ ಪೂರ್ವ ಸೇವಾವಧಿ ಪೂರೈಸಿದಲ್ಲಿ ನಿಯಮಾನುಸಾರ ಜೇಷ್ಠತಾ ಪಟ್ಟಿಗೆ / ಬಡ್ತಿಗೆ ಪರಿಗಣಿಸಬಹುದಾಗಿದೆ.

**(ಕರಡು ಪ್ರತಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ನಿರ್ದೇಶಕರು

(ಪ್ರಾಥಮಿಕ ಶಿಕ್ಷಣ)

1 ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು (ಆಡಳಿತ)

2 ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.

3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

4 ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ

5. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಜಂಟಿ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಬೆಂಗಳೂರು, ಮೈಸೂರು. ಬೆಳಗಾಂ, ಗುಲ್ಬರ್ಗಾ.

6. ಕಛೇರಿ ಪ್ರತಿ